ಸ್ಮರಿಸುವೆ ನಾ ನಿಮ್ಮ ಚರಣಕಮಲ ಗುರು ವಿಜಯರಾಯ ।
ಶರಣಜನಪ್ರಿಯ ಪರಮಕರುಣಾನಿಧಿ ವಿಜಯರಾಯ ॥ ಪ ॥

ಜನ್ಮಾರಭ್ಯವು ನಿಮ್ಮಗುಣಕರ್ಮಗಳೆಲ್ಲ ವಿಜಯರಾಯ ।
ಇನ್ನು ನಾ ವರ್ಣಿಸಲೆಷ್ಟರವನು ಗುರು ವಿಜಯರಾಯ ॥ ೧ ॥

ದಿವಿಜರ ವೇಷದಿಂದವನಿಯೊಳುದುಸಿದ್ಯೊ ವಿಜಯರಾಯ ।
ದಿವಿಜರಿಂದಲಿ ಪ್ರತಿದಿವಸ ಬಿಡದಲಿದ್ಯೋ ವಿಜಯರಾಯ ॥ ೨ ॥

ಭಾಗವತಧರ್ಮವಹಿಸಿ ತ್ರಿರಾವರ್ತಿ ವಿಜಯರಾಯ ।
ಭಾಗೀರಥಿಯ ಚನ್ನಾಗಿ ಸೇವಿಸಿದ್ಯೊ ವಿಜಯರಾಯ ॥ ೩ ॥

ಕಂಚಿಕಾಳ್ಹಸ್ತಿ ಶ್ರೀರಂಗಸೇತುಯಾತ್ರೆ ವಿಜಯರಾಯ ।
ಪಂಚವಾರವು ಸಂಚರಿಸಿ ಸೇವಿಸಿದಯ್ಯ ವಿಜಯರಾಯ ॥ ೪ ॥

ಮರಿಯಾದೆಯಿಲ್ಲದೆ ವರಗಿರಿಯಾತ್ರೆಯ ವಿಜಯರಾಯ ।
ಪರಿಪರಿಕ್ಷೇತ್ರಕ್ಕೆ ಪೋಗಿ ಪೂಜಿಸಿದಯ್ಯ ವಿಜಯರಾಯ ॥ ೫ ॥

ಮಹಿಯಲ್ಲಿ ತಿರುಗಿ ಸರ್ವಕ್ಷೇತ್ರದಿ ವಿಜಯರಾಯ ।
ವಹಿಸಿದಾಸತ್ವ ವೈಷ್ಣವ ಸಿದ್ಧಾಂತ ವಿಜಯರಾಯ ॥ ೬ ॥

ಗುರೂಪದೇಶಕನಾಗಿ ವ್ಯಾಸಕಾಶಿಯಲ್ಲಿದ್ಯೋ ವಿಜಯರಾಯ ।
ದುರ್ಯೋನಿಯಲ್ಲಿ ಬಂದ ವಂಶ ಉದ್ಧರಿಸಿದ್ಯೋ ವಿಜಯರಾಯ ॥ ೭ ॥

ಸ್ವಚ್ಛವಾಗಿ ಗಂಗಾತೀರ ವಾಸಮಾಡಿ ವಿಜಯರಾಯ ।
ಹೆಚ್ಚಾದ ಪರ್ವಣಿಯೊಳು ಮತ್ಸ್ಯೋದರಿತೋರ್ದೆ ವಿಜಯರಾಯ ॥ ೮ ॥

ತುಂಗಾತೀರದಿ ಕುಳಿತು ಗಂಗೆ ಪೆಚ್ಚಿಸಿದಿ ವಿಜಯರಾಯ ।
ಅಂಗದ ಮುಸುಕಿಲಿ ಪಾಂಡುರಂಗನ್ನ ಕಂಡ್ಯೊ ವಿಜಯರಾಯ ॥ ೯ ॥

ಮಧ್ವಮತದ ಸಾರ ಕವನದಿ ರಚಿಸಿದ್ಯೊ ವಿಜಯರಾಯ ।
ಅದ್ವೈತಸಿದ್ಧಾಂತಾಬದ್ಧವೆನಿಸಿದ್ಯೊ ವಿಜಯರಾಯ ॥ ೧೦ ॥

ಶುದ್ಧ ತತ್ವಸಾರ ಸುಳಾದಿ ಪದಮಾಡಿ ವಿಜಯರಾಯ ।
ಹೃದ್ಯದಿ ಧಿಮಿಕೆಂದು ಹರಿಯ ಕುಣಿಸಿದ್ಯೊ ವಿಜಯರಾಯ ॥ ೧೧ ॥

ಸದಾಚಾರಸಂಪತ್ತು ಮಧುಕರವೃತ್ತಿಯು ವಿಜಯರಾಯ ।
ಕದನ್ನ ಉಂಡರಿಯರು ಶಿಷ್ಯಜನಸಂಘ ವಿಜಯರಾಯ ॥ ೧೨ ॥

ಭಕ್ತರ ಅಪಮೃತ್ಯುಬಿಡಿಸಿ ಆಯುವಿತ್ತೆ ವಿಜಯರಾಯ ।
ಪ್ರತ್ಯಕ್ಷ್ಯವಲ್ಲವೆ ಮನವೆ ಇದಕೆ ಸಾಕ್ಷಿ ವಿಜಯರಾಯ ॥ ೧೩ ॥

ನಿತ್ಯಾನ್ನ ಪುತ್ರೋತ್ಸವಗಳು ಭೃತ್ಯರಿಗೆ ವಿಜಯರಾಯ ।
ಮತ್ತೆ ಧರ್ಮ ಮುಂಜಿ ಮದುವೆಗಳ ಮಾಡಿಸಿದ್ಯೊ ವಿಜಯರಾಯ ॥ ೧೪ ॥

ಭಕ್ತಜನರಿಗೆ ತತ್ವ ಉಪದೇಶವ ಮಾಡಿ ವಿಜಯರಾಯ ।
ಹೃತ್ಕಮಲದಿ ಹರಿಯ ತಿಳಿಸಿ ಸದ್ಗತಿಗಭಯ ಇತ್ತ್ಯೋನೀ ವಿಜಯರಾಯ ॥ ೧೫ ॥

ಎಲ್ಲರಲ್ಲಿ ಸಿರಿನಲ್ಲನ ಅಂಶವ ವಿಜಯರಾಯ ।
ನಿಲ್ಲಿಸಿದೆಯೊ ನಿನ್ನ ಬಗೆಯ ಬಲ್ಲವಯಾರೊ ವಿಜಯರಾಯ ॥ ೧೬ ॥

ಬಲ್ಲಿದ ನೀನೊಂದು ರೂಪದಿ ಎನ್ನಲ್ಲಿ ವಿಜಯರಾಯ ।
ನಿಲ್ಲಿಸಿದ್ದರೆ ಎಲ್ಲ ಜನರು ಓಲೈಸೋರು ವಿಜಯರಾಯ ॥ ೧೭ ॥

ನಿಮ್ಮ ಪುಣ್ಯದ ಶೇಷವಿನ್ನು ಉಂಬೆವೊ ನಾವು ವಿಜಯರಾಯ ।
ನಮ್ಮ ಸಾಮರ್ಥ್ಯವು ನಿಮ್ಮದೆಂದಿಗು ವಿಜಯರಾಯ ॥ ೧೮ ॥

ಎನ್ನಿಂದ ಆಗೋ ಸಾಧನವೆಲ್ಲ ನಿನ್ನದೊ ವಿಜಯರಾಯ ।
ಎನ್ನ ಪೊಂದಿಹರೆಲ್ಲ ನಿನ್ನ ದಾಸರೊ ಗುರು ವಿಜಯರಾಯ ॥ ೧೯ ॥

ಈಗ ಈ ಯುಗದಿ ಸಾಧನವೆಂಬುದು ಕಾಣೆ ವಿಜಯರಾಯ ।
ಯೋಗಿ ನಿನ್ನವರಿಗೆ ಬೇಗ ಒದಗುವುದೊ ವಿಜಯರಾಯ ॥ ೧೮ ॥

ಗುರು ನಿನ್ನ ಕರುಣಕವಚತೊಟ್ಟ ಭಕುತರ್ಗೆ ವಿಜಯರಾಯ ।
ಸಿರಿವರ ಗೋಪಾಲವಿಠಲರೇಯ ಕೈಪಿಡಿವನೊ ವಿಜಯರಾಯ ॥ ೨೧ ॥